ಅಸಲು ದಾವೆ ನಂಃ 358/2020 ಪಿ.ಡಬ್ಲ್ಯೂಃ 1- ನಿಂಗಪ್ಪ ಕಲ್ಲಾಪುರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 21/03/2024 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ನಂ . 1 ರಿಂದ 6 ನೇ ಪರ ಶ್ರೀ SSH ವಕೀಲರಿಂದ**

1. ನನ್ನ ತಂದೆಗೆ 6 ಜನ ಗಂಡು ಮಕ್ಕಳು. 1) ಹನಮಪ್ಪ 2) ತಿಪ್ಪಣ್ಣ 3) ಈರಪ್ಪ 4) ಸೋಮಲಿಂಗಪ್ಪ 5) ನಿಂಗಪ್ಪ 6) ಶಿವಾನಂದಪ್ಪ. 2) ತಿಪ್ಪಣ್ಣ 3) ಈರಪ್ಪ 4) ಸೋಮಲಿಂಗಪ್ಪ ಈಗ ತೀರಿಕೊಂಡಿದ್ದಾರೆ ಎಂದರೆ ನಿಜ. ಹನಮಪ್ಪ ಲಗ್ನ ಆಗದೇ ತೀರಿಕೊಂಡಿದ್ದಾರೆ . ತಿಪ್ಪಣ್ಣನಿಗೆ ಲಕ್ಷ್ಮವ್ವ ಎಂಬ ಹೆಂಡತಿ ಹಾಗೂ ಸಿದ್ದಪ್ಪ ಮತ್ತು ಶರಣಪ್ಪ ಎಂಬ ಮಕ್ಕಳು ಎಂದರೆ ನಿಜ. ಈರಪ್ಪನಿಗೆ ಲಕ್ಷ್ಮವ್ವ ಎಂಬ ಹೆಂಡತಿ ಹಾಗೂ ಗುರುಶಾಂತಪ್ಪ ಮತ್ತು ಚಂದಪ್ಪ ಎಂಬ ಇಬ್ಬರೂ ಮಕ್ಕಳು ಎಂದರೆ ನಿಜ. ಚಂದಪ್ಪ ಲಗ್ನ ಆಗದೇ ತೀರಿಕೊಂಡಿದ್ದಾನೆ. ನಮ್ಮ ಗರಾಣೆಯಲ್ಲಿ 15 ಎಕರೆ ಜಮೀನು ಅಸೂಟಿಯಲ್ಲಿ ಇರುತ್ತದೆ. ಅದರಲ್ಲಿ 7 ಎಕರೆ , 5 ಎಕರೆ ಮತ್ತು 3 ಎಕರೆ ಇರುತ್ತದೆ. 7 ಎಕರೆ ಜಮೀನಿನ ಸರ್ವೆ ನಂಬರ ನನಗೆ ಗೊತ್ತಾಗುವುದಿಲ್ಲ. 7 ಎಕರೆ ಜಮಿನೀನಲ್ಲಿ 3 ಎಕರೆ 36 ಗುಂಟೆ ಜಮೀನು ತಿಪ್ಪಣ್ಣನಿಗೆ , ಇನ್ನೊಂದು 3 ಎಕರೆ 16 ಗುಂಟೆ ಈರಪ್ಪನಿಗೆ ಬಂತು, ಆದ್ದರಿಂದ 7 ಎಕರೆ ಈಗ ಅಖಂಡವಾಗಿ ಉಳಿದಿಲ್ಲ. ಅದರ ಉತಾರವನ್ನು ಹಾಜರು ಮಾಡಲು ಆಗಿರುವುದಿಲ್ಲ. ಈರಪ್ಪ ಮತ್ತು ತಿಪ್ಪಣ್ಣನಿಗೆ ನಮ್ಮ ಹಿರಿಯರು ಆ ರೀತಿ ಹಚ್ಚಿದ್ದಾರೆ. ಆಗ ನಾನು ಅಲ್ಪವಯಿ ಇದ್ದೆ. ಅಸೂಟಿ ಗ್ರಾಮದ ಸರ್ವೆ ನಂ.193/5 3 ಎಕರೆ 8 ಗುಂಟೆ ನನ್ನ ಹೆಸರಿಗೆ ಇದೆ ಎಂದರೆ ನಿಜ. ಅದನ್ನು ನಾನು ಕಬ್ಜಾ ವಹಿವಾಟಿನಲ್ಲಿ ಇಟ್ಟುಕೊಂಡಿದ್ದೇನೆ. ಸರ್ವೆ ನಂ.473/ಬಿ 5 ಎಕರೆ 5 ಗುಂಟೆಯಲ್ಲಿ ಸೋಮಲಿಂಗಪ್ಪ ಮತ್ತು ಶಿವಾನಂದಪ್ಪ ಇವರ ಕಬ್ಜಾದಲ್ಲಿ ಇದೆ. ಅದು ಯಾವ ತಾರೀಖಿಗೆ ಖಾತೆ ಆಗಿದೆಯೋ ಅವರೇ ಕಬ್ಜಾದಲ್ಲಿ ಇದ್ದಾರೆ . ತಿಪ್ಪಣ್ಣ ಮತ್ತು ಈರಪ್ಪನ ಹೆಂಡತಿ-ಮಕ್ಕಳಿಗೆ ಕಂದಾಯ ಕಾಗದ ಪತ್ರಗಳ ಬಗ್ಗೆ ಜ್ಞಾನವಿಲ್ಲ ಎಂದರೆ ಸರಿಯಲ್ಲ. ತಿಪ್ಪಣ್ಣ ಮತ್ತು ಈರಪ್ಪನ ಹೆಂಡತಿ-ಮಕ್ಕಳಿಗೆ ನಾನು ಹೆದರಿಸಿ-ಬೆದರಿಸಿ ಅವರುಗಳಿಗೆ ಸಾಗು ಮಾಡಲಿಕ್ಕೆ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 3 ಎಕರೆ 36 ಗುಂಟೆ ತಿಪ್ಪಣ್ಣ ಮತ್ತು ಆತನ ಹೆಂಡತಿ ಮಕ್ಕಳ ಕಬ್ಜಾದಲ್ಲಿ ಹಾಗೂ 3 ಎಕರೆ 16 ಗುಂಟೆ ಈರಪ್ಪನ ಹೆಂಡತಿ ಮತ್ತು ಮಕ್ಕಳ ಕಬ್ಜಾದಲ್ಲಿ ಇದೆ ಎಂದರೆ ನಿಜ. ನಾನು ಆ ಕಬ್ಜಾಕ್ಕೆ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮತ್ತು ನಾನು ಎಲ್ಲಾ ಜಮೀನುಗಳ ಕಬ್ಜಾದಲ್ಲಿ ಪ್ರತ್ಯೇಕವಾಗಿದ್ದರೂ ಸಹ ನಾನು ಈ ಸುಳ್ಳು ಕೇಸ ಹಾಕಿದ್ದೇನೆ ಎಂದರೆ ಸರಿಯಲ್ಲ . ನಾನು 1996 ರಿಂದ ಮಲ್ಲಾಪುರದಲ್ಲಿ ವಾಸವಾಗಿದ್ದೇನೆ . ಮೇಲ್ಕಂತ ಗ್ರಾಮದಲ್ಲಿ ಇರುವ 6 ಅಂಕಣದ ಮನೆಯಲ್ಲ್ ಶಿವಾನಂದಪ್ಪ ಮತ್ತು ಆತನ ಹೆಂಡತಿ ಮಕ್ಕಳು ವಾಸವಾಗಿದ್ದಾರೆ . ಇನ್ನೊಂದು ಖಾಲಿ ಜಾಗ ಇದ್ದು ಅದರ ಅಳತೆ ಪೂರ್ವ ಪಶ್ಚಿಮ 18 ಅಡಿ ಉತ್ತರ ದಕ್ಷಿಣ 30 ಅಡಿ ಇರುತ್ತದೆ. ಅದು ನನ್ನ ಹೆಸರಿನಲ್ಲಿರುತ್ತದೆ. ಅಲ್ಲಿ ಈಗ ಯಾರು ವಾಸವಾಗಿರುವುದಿಲ್ಲ. 60*44 ಮನೆಯಲ್ಲಿ ತಿಪ್ಪಣ್ಣನ ಹೆಂಡತಿ-ಮಕ್ಕಳು ವಾಸವಾಗಿದ್ದಾರೆ. 1998 ರಲ್ಲಿ ನಾವು ಎಲ್ಲಾ ಅಣ್ಣ-ತಮ್ಮಂದಿರೂ ಸಹ ನಾನು ಬೇರೆಯಾಗಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲ್ಕಂತ ಗ್ರಾಮದಲ್ಲಿ ತಿಪ್ಪಣ್ಣನ ಹೆಂಡತಿ ಲಕ್ಷ್ಮವ್ವ ಮತ್ತು ಶಿವಾನಂದಪ್ಪ ವಾಸವಾಗಿದ್ದಾರೆ. ಉಳಿದವರೆಲ್ಲಾ ಬೇರೆ ಬೇರೆ ಗ್ರಾಮದಲ್ಲಿ ವಾಸವಾಗಿದ್ದಾರೆ. ಸೋಮಲಿಂಗಪ್ಪನ ಹೆಂಡತಿ ಅರಶಿನಗೋಡೆ ಗ್ರಾಮದಲ್ಲಿ ಇರುತ್ತಾರೆ.

**ಮರು ವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**